**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 92/2020**

**ಚಾ.ಸಾಃ6, ಫ್ರಾ.ಸಾಃ2**

| | |
|---|---|
| ಸಾಕ್ಷಿದಾರನ ಹೆಸರು | ರಾಜೇಶ ಗುನಗಾ |
| ತಂದೆಯ ಹೆಸರು | ವಾಸುದೇವ ಗುನಗಾ |
| ವಯಸ್ಸು | 51 ವರ್ಷಗಳು |
| ಉದ್ಯೋಗ | ಅರ್ಚಕ, ದುರ್ಗಾಪರಮೇಶ್ವರಿ ದೇವಸ್ಥಾನ, ಚಂದಾವರ |
| ವಾಸ್ತವ್ಯ | ಕೆಕ್ಕಾರ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 30-07-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನನಗೆ ಬುದ್ಧಿ ಬಂದಾಗಿನಿಂದ ನಾನು ಚಂದಾವರ ಗ್ರಾಮದಲ್ಲಿರುವ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಅರ್ಚಕನಾಗಿ ಕೆಲಸ ಮಾಡುತ್ತಿದ್ದೇನೆ. ಸದರಿ ದೇವಸ್ಥಾನದ ಬಾಗಿಲು ಬೆಳಿಗ್ಗೆ 07-00 ಕ್ಕೆ ತೆಗೆದು ಸಾಯಂಕಾಲ 08-00ರ ವರೆಗೆ ತೆರೆದಿರುತ್ತದೆ. 08-00ರ ನಂತರ ನಾನು ಸದರಿ ದೇವಸ್ಥಾನವನ್ನು ಬಂದ್ ಮಾಡುತ್ತೇನೆ.

ದಿನಾಂಕ 17-07-2019ರಂದು ನಾನು ಮಾಮೂಲಿನಂತೆ ಬೆಳಿಗ್ಗೆ ಸದರಿ ದೇವಸ್ಥಾನದ ಬಾಗಿಲನ್ನು ತೆಗೆದು ರಾತ್ರಿ 08-00ರ ಸಮಯಕ್ಕೆ ಮುಚ್ಚಿ ಬಾಗಿಲು ಹಾಕಿಕೊಂಡು ಹೋಗಿರುತ್ತೇನೆ. ಮರುದಿನ ಅಂದರೆ ದಿನಾಂಕ 18-07-2019ರ ಬೆಳಿಗ್ಗೆ 07-00ರ ಸಮಯಕ್ಕೆ ನಾನು ಮನೆಯಲ್ಲಿದ್ದಾಗ ದೇವರ ಅಭಿಷೇಕಕ್ಕೆ ಹಾಲು ತರುವ ಶ್ರೀಮತಿ ದೇವಿ ಗೌಡರವರು ಬೇರೆಯೊಬ್ಬರ ಬೈಕಿನಲ್ಲಿ ಮನೆಗೆ ಬಂದು ದೇವಸ್ಥಾನದ ಬಾಗಿಲು ತೆರೆದಿರುವುದಾಗಿ ತಿಳಿಸಿರುತ್ತಾರೆ. ತಕ್ಷಣ ನಾನು ದೇವಸ್ಥಾನದ ಬಳಿ ಬಂದು ನೋಡಲಾಗಿ ಬಾಗಿಲು ತೆರೆದಿತ್ತು. ಸದರಿ ವಿಷಯವನ್ನು ನಾನು ದೇವಸ್ಥಾನದ ಅಧ್ಯಕ್ಷರಾದ ಚಾಸಾ-1ರವರಿಗೆ ತಿಳಿಸಿದ್ದು, ಅವರು ಮತ್ತು ದೇವಸ್ಥಾನದ ಇತರೇ ಪದಾಧಿಕಾರಿಗಳು ಮತ್ತು ಭಕ್ತರು ಸ್ಥಳಕ್ಕೆ ಬಂದಿದ್ದು ಎಲ್ಲರೂ ಒಟ್ಟಿಗೇ ದೇವಸ್ಥಾನದ ಒಳಗೆ ಹೋಗಿ ನೋಡಲಾಗಿ ಕಾಣಿಕೆ ಹುಂಡಿ ಡಬ್ಬ ಇರಲಿಲ್ಲ. ದೇವಸ್ಥಾನದ ಸುತ್ತಮುತ್ತ ಪರಿಶೀಲಿಸಲಾಗಿ ದೇವಸ್ಥಾನದ ಹಿಂದೆ ಒಂದು ಗೇರು ಮರದ ಕೆಳಗೆ ಹುಂಡಿ ಇತ್ತು. ಸದರಿ ಹುಂಡಿಯ ಒಳಗೆ ಇದ್ದ ಹಣ ಇರಲಿಲ್ಲ. ನಂತರ ಚಾಸಾ-1ರವರು ಪಿರ್ಯಾದು ನೀಡಿರುತ್ತಾರೆ. ಘಟನೆ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

ಒಂದು ವರ್ಷದ ನಂತರ ಅಂದರೆ ದಿನಾಂಕ 04-08-2020ರಂದು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಪೋಲಿಸರು ದೇವಸ್ಥಾನದ ಬಳಿ ಕರೆತಂದಿದ್ದರು. ಆರೋಪಿಗಳನ್ನು

ಕೇಳಲಾಗಿ ಅವರು ದೇವಸ್ಥಾನದಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿರುತ್ತಾರೆ. ಹುಂಡಿಯಲ್ಲಿ 3 ಸಾವಿರ ಹಣ ಇದ್ದುದ್ದಾಗಿ ತಿಳಿಸಿ ಅದನ್ನು ಖರ್ಚು ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ಮತ್ತೊಮ್ಮೆ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನನ್ನನ್ನು ಅರ್ಚಕನಾಗಿ ನೇಮಿಸಿದ ಬಗ್ಗೆ ಲಿಖಿತವಾದ ಆದೇಶ ಇರುತ್ತದೆ. ಪ್ರಧಾನ ಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿಯಲಾಗಿತ್ತು ಮತ್ತು ಅದು ನೆಲದ ಮೇಲೆ ಬಿದ್ದುಕೊಂಡಿತ್ತು. ಕಳ್ಳತನವಾದ ದಿನ ಯಾವುದೇ ಮೀಟಿಂಗ್ ಮಾಡಿರುವುದಿಲ್ಲ. ಹುಂಡಿಯು ಪ್ರಧಾನ ಬಾಗಿಲಿನ ಒಳಗೆ ಮತ್ತು ಗರ್ಭಗುಡಿಯ ಹೊರಗೆ ಹಾಲಿನಲ್ಲಿ ಇತ್ತು. ಅದನ್ನು ನೆಲಕ್ಕೆ ಹುಗಿಯಲಾಗಿರಲಿಲ್ಲ. ಹುಂಡಿಗೆ ಹಾಕಿದ್ದ ಬೀಗವನ್ನು ಸಹ ಮುರಿಯಲಾಗಿತ್ತು. ಆರೋಪಿಗಳನ್ನು ಕರೆತಂದಾಗ ನಾನು ದೇವಸ್ಥಾನದಲ್ಲಿದ್ದೆ. ಅವರನ್ನು ಸಾಯಂಕಾಲ ಸುಮಾರು 04-00 ರ ಸಮಯಕ್ಕೆ ಕರೆತರಲಾಗಿತ್ತು. ಆರೋಪಿತರನ್ನು ಸದರಿ ದಿನದಂದು ದೇವಸ್ಥಾನದ ಬಳಿ ಕರೆತಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ನಾನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ದೇವಸ್ಥಾನದಲ್ಲಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಆದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**